ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ನ್ಯಾಯಾಲಯಗಳಲ್ಲಿರುವ ಪ್ರಕರಣಗಳು

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :-

376 (311) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಿಂದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ, ಬಾಗಲಕೋಟೆ ಈ ಜಿಲ್ಲೆಗಳಲ್ಲಿ ಇರುವ ಒಟ್ಟು ನ್ಯಾಯಾಲಯ ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರಾದೇಶಿಕ ಆಯುಕ್ತರವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಸೀಲ್ದಾರ್ವಾರು, ದಂಡಾಧಿಕಾರಿಗಳವಾರು ವಿವರ ನೀಡುವುದು)

(ಆ) ಇದರಲ್ಲಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗಬೇಕಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರಾದೇಶಿಕ ಆಯುಕ್ತರವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಸೀಲ್ದಾರ್ವಾರು, ದಂಡಾಧಿಕಾರಿಗಳವಾರು ವಿವರ ನೀಡುವುದು)

(ಇ) ಇದರಲ್ಲಿ ಭೂಕಂದಾಯ, ಭೂಸುಧಾರಣೆ ಹಾಗೂ ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳಿವೆ ; ಅದರಲ್ಲಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರಾದೇಶಿಕ ಆಯುಕ್ತರವಾರು, ಜಿಲ್ಲಾಧಿಕಾರಿವಾರು, ಸಹಾಯಕ ಆಯುಕ್ತರವಾರು ಹಾಗೂ ತಾಲ್ಲೂಕು ತಹಸೀಲ್ದಾರ್ವಾರು, ದಂಡಾಧಿಕಾರಿಗಳವಾರು ವಿವರ ನೀಡುವುದು)

(ಈ) ಸದರಿ ಪ್ರಕರಣಗಳು ವರ್ಷಗಟ್ಟಲೇ ನಡೆಯುತ್ತಿದ್ದು, ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು ?